ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಟಿ. ನರೇಂದ್ರ ಪ್ರಸಾದ್

ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಉಪ ವಿಲೇಖನಾಧಿಕಾರಿ (ಆಡಳಿತ) -ವಿರುದ್ಧ ಕರ್ನಾಟಕ ಮಾಹಿತಿ ಆಯೋಗದ ಪ್ರತಿನಿಧಿಯಾಗಿ ನಿರ್ದೇಶಕರು ಹಾಗೂ ಮತ್ತೊಬ್ಬರು

ರಿಟ್ ಅರ್ಜಿ ಸಂಖ್ಯೆ: 26763/2013 (ಜಿಎಮ್–ಆರ್‌ಇಎಸ್) ಇದರೊಂದಿಗೆ ಇತರೆ, ದಿನಾಂಕ: 9ನೇ ಜನವರಿ, 2019.

ಆದೇಶ

ನ್ಯಾಯಮೂರ್ತಿ ಶ್ರೀ ಹೆಚ್.ಟಿ. ನರೇಂದ್ರ ಪ್ರಸಾದ್:

ಈ ಎರಡೂ ರಿಟ್ ಅರ್ಜಿಗಳು ಪರಸ್ಪರ ಒಂದಕ್ಕೊಂದು ಸಂಬಂಧಿಸಿದ್ದರಿಂದ, ಅದರ ವಿಷಯಗಳನ್ನು ಒಟ್ಟಾಗಿ ಸೇರಿಸಲಾಗಿದ್ದು, ಎರಡೂ ರಿಟ್ ಅರ್ಜಿಗಳ ವಾದವನ್ನು ಒಟ್ಟಾಗಿ ಆಲಿಸಿ, ಸಾಮಾನ್ಯ ಆದೇಶದ ಮೂಲಕ ರಿಟ್ ಅರ್ಜಿಗಳನ್ನು ಇತ್ಯರ್ಥಗೊಳಿಸಲಾಗಿದೆ.

2. ದಿನಾಂಕ 30.04.2013 ರಂದು ಮೊದಲನೆಯ ಪ್ರತ್ಯರ್ಜಿದಾರರು ಹೊರಡಿಸಿದ ಕೆಐಸಿ ಸಂಖ್ಯೆ 10682/ಪಿಟಿಎನ್/2012 ರಲ್ಲಿನ ರಿಟ್ ಅರ್ಜಿಸಂಖ್ಯೆ: 26762/2013 ರ ಮತ್ತು ಕೆಐಸಿ ಸಂಖ್ಯೆ 10684/ಪಿಟಿಎನ್/2012 ರಲ್ಲಿನ ರಿಟ್ ಅಪೀಲು ಸಂಖ್ಯೆ 26763/2013 ರ (ಅನುಬಂದ-ಎಫ್) ಆದೇಶಗಳ ವಿರುದ್ಧ ಈ ಎರಡೂ ರಿಟ್ ಅರ್ಜಿಗಳನ್ನು ದಾಖಲಿಸಲಾಗಿದೆ.

3. ಎರಡನೆಯ ಪ್ರತ್ಯರ್ಜಿದಾರನು ದಿನಾಂಕ 07.05.2012 ರಂದು ರಿಟ್ ಅರ್ಜಿ ಸಂಖ್ಯೆ 26762/2013 ರಲ್ಲಿ ಡಾ. ಎಸ್.ಕೃಷ್ಣಮೂರ್ತಿಯವರಿಂದ, ಸ್ವಾಮ್ಯಚೋರದ ಸುರಭಿ 2000 ಕನ್ನಡ ಸಾಫ್ಟ್ವೇರ್ನ್ನು ಉಪಯೋಗಿಸಲು ಮುಂದುವರೆಯುವುದರಿಂದ ಹಿಂದಕ್ಕೆ ಸರಿಯುವುದನ್ನು ಕೋರಿರುವ ನೋಟೀಸಿನ ಪ್ರಮಾಣಿತ ಪ್ರತಿಯನ್ನು ಮಹಾ ವಿಲೇಖನಾಧಿಕಾರಿ ಕಛೇರಿಯವರು ಪಡೆದುಕೊಂಡಿರುವುದರ ಬಗ್ಗೆ ಮಾಹಿತಿಯನ್ನು ಕೋರಿರುತ್ತಾರೆ, ಮತ್ತು ಮಾನ್ಯ ವಕೀಲರಾದ ಡಾ.ಎಸ್.ಕೃಷ್ಣಮೂರ್ತಿಯವರಿಂದ ಪಡೆದ ನೋಟೀಸಿನ ಮೇಲೆ ತೆಗೆದುಕೊಂಡ ಕ್ರಮ ಮತ್ತು ಅದಕ್ಕೆ ನೀಡಿದ ಪ್ರತ್ಯುತ್ತರ ಮತ್ತು 2009-10 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸಿದ ಮಹಾವಿಲೇಖನಾಧಿಕಾರಿಗಳ ಹೆಸರು ಮತ್ತು ಅವರುಗಳ ಸಂಪರ್ಕ ಮಾಹಿತಿಯನ್ನು ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.ದಿನಾಂಕ 04.06.2012 ರ ರಿಟ್ ಅರ್ಜಿ ಸಂಖ್ಯೆ .26763/2013 ರಲ್ಲಿ ಸುರಭಿ 2000 ಕನ್ನಡ ಸಾಫ್ಟ್ವೇರ್ನ ಪೂರೈಕೆದಾರರ ಗಮನಕ್ಕೆ ನೀಡುವುದಕ್ಕೆ ಅನ್ವಯಿಸುವ ಮಾಹಿತಿ ಮತ್ತು ಸುರಭಿ ಕನ್ನಡ ಸಾಫ್ಟ್ವೇರ್ ಅಚ್ಚುಪಿಡಿ ಅಚ್ಚು ಪಿಡಿ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಧೀನವಾದ ನ್ಯಾಯಾಲಯಗಳಲ್ಲಿ ಅದರ ಅನುಸ್ಥಾಪನೆಯ ಬಗ್ಗೆ ಮತ್ತು ಇತರೆ ಸದೃಶ ಮಾಹಿತಿಗಳನ್ನು ಕೋರಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.ಮಾಹಿತಿ ಹಕ್ಕು ಕಾಯ್ದೆ, 2005 ರ (ಸಂಕ್ಷಿಪ್ತವಾಗಿ ' ಆರ್‌ಟಿಐ ಅಧಿನಿಯಮ) 6 ( 1) ನೇ ಪ್ರಕರಣ ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು, ಎರಡೂ ಅರ್ಜಿದಾರರಿಗೆ ಅನುಬಂಧ- ಎ ಎಂದು ಹಾಜರುಪಡಿಸಲಾಗಿದೆ.ಅರ್ಜಿಗಳನ್ನು ಅನುಸರಿಸಿ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅನುಕ್ರಮವಾಗಿ ದಿನಾಂಕ 25.06.2012 ಮತ್ತು 21.06.2012 ರಂದು ರಿಟ್ ಅರ್ಜಿ ಸಂಖ್ಯೆ.26762/2013 ಮತ್ತು ರಿಟ್ ಅರ್ಜಿ ಸಂಖ್ಯೆ 26763/2013 ರಲ್ಲಿ ಹಿಂಬರಹವನ್ನು ನೀಡಿರುತ್ತಾರೆ.

3. ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ಆದೇಶದಿಂದ ಭಾದಿತರಾದ ಎರಡನೆಯ ಪ್ರತ್ಯರ್ಜಿದಾರ, ಅಪೀಲು ಪ್ರಾಧಿಕಾರ, ಅಂದರೆ ವಿಲೇಖನಾಧಿಕಾರಿ (ನ್ಯಾಯಿಕ), ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ, ಆರ್.ಟಿ.ಐ ಅಧಿನಿಯಮದ 19 ( 1) ನೇ ಪ್ರಕರಣದ ಅಡಿಯಲ್ಲಿ ಒಂದು ಅಪೀಲನ್ನು ಸಲ್ಲಿಸಿದ್ದು, ಆ ಅಪೀಲನ್ನು ರಿಟ್ ಅರ್ಜಿ ಸಂಖ್ಯೆ.26762/2013 ರಲ್ಲಿನ ಆರ್ಟಿಐ ಅಪೀಲು ಸಂಖ್ಯೆ 43/2012 ಮತ್ತು ರಿಟ್ ಅರ್ಜಿ ಸಂಖ್ಯೆ 26763/2013 ರಲ್ಲಿನ ಆರ್ಟಿಐ ಅಪೀಲು ಸಂಖ್ಯೆ 40/2012 ಎಂದು ಕ್ರಮಾಂಕ ನೀಡಲಾಗಿದೆ.ಪಕ್ಷಕಾರರ ಎದುರುದಾರರ ವಾದವನ್ನು ಪರಿಗಣಿಸಿದ ನಂತರ, ಎರಡೂ ಮೊಕದ್ದಮೆಯಲ್ಲಿ, ಅನುಬಂಧ-ಸಿ ರ ಮೇರೆಗೆ, ದಿನಾಂಕ 15.09.2012 ರಂದು ಅಪೀಲು ಪ್ರಾಧಿಕಾರವು ಒಂದು ಆದೇಶವನ್ನು ಹೊರಡಿಸಿರುತ್ತದೆ.

4. ಅದೇ ಕಾರಣದಿಂದ ಭಾದಿತರಾದ ಇಲ್ಲಿನ ಎರಡನೆಯ ಪ್ರತ್ಯರ್ಜಿದಾರರು ಮೊದಲನೆಯ ಪ್ರತ್ಯರ್ಜಿದಾರ ಕರ್ನಾಟಕ ಮಾಹಿತಿ ಆಯೋಗದ ಎದುರು, ಆರ್ಟಿಐ ಅಧಿನಿಯಮದ 19 ( 3) ನೇ ಪ್ರಕರಣದ ಒಂದು ಅಪೀಲನ್ನು ಸಲ್ಲಿಸಿರುತ್ತಾರೆ.ದಿನಾಂಕ 30.04.2013 ರಂದು, ಎರಡನೆಯ ಪ್ರತ್ಯರ್ಜಿದಾರನು ಎರಡೂ ಮೊಕದ್ದಮೆಯಲ್ಲಿ ಅನುಬಂಧ-ಎಫ್ ದಲ್ಲಿ ಹಾಜರು ಪಡಿಸಲಾದ ಆದೇಶವನ್ನು ಹೊರಡಿಸಿರುತ್ತಾರೆ.ಆ ಆದೇಶದ ಪರಿಣಾಮಕಾರಿ ಭಾಗವನ್ನು ಈ ಕೆಳಗಿನಂತೆ ಉದ್ಧರಿಸಿದೆ:

" ಅರ್ಜಿದಾರರು ಕೋರಿರುವ ಮಾಹಿತಿಯು ವಕೀಲರ ಬಳಿ ಇದ್ದಲ್ಲಿ, ಕಾಯ್ದೆಯ ವಿಧಿ 55 ( 3), 5 ( 4) ಮತ್ತು 5 ( 5) ರಂತೆ ಕ್ರಮ ಕೈಗೊಂಡು ಅರ್ಜಿದಾರರಿಗೆ ನೇರವಾಗಿ ಮಾಹಿತಿ ನೀಡುವಂತೆ ಸೂಚನೆ ನೀಡಬಹುದಾಗಿತ್ತು.ಕಡತ ಲಭ್ಯವಿಲ್ಲವೆಂಬ ಕಾರಣಕ್ಕೆ ಮಾಹಿತಿ ನಿರಾಕರಿಸಿರುವುದು ಸರಿಯಾದ ಕ್ರಮವಲ್ಲ.ಸಂಬಂಧಪಟ್ಟ ವಕೀಲರಿಗೆ ದಿನಾಂಕ 31.05.2013 ರಂದು ಕಛೇರಿಗೆ ಕಡತವನ್ನು ಹಾಜರು ಪಡಿಸಬೇಕೆಂದು, ಈ ಕಡತವನ್ನು ಅದೇ ದಿನ ಅಪರಾಹ್ನ 3.00 ಘ ಂ ಟ್ ಗೌ ಪರಿಶೀಲ ನ್ ವಾ ಡ ಲು ಅರ್ಜಿದಾರರಿಗೆ ಅವಕಾಶ ನೀಡಬೇಕೆಂದು, ಪರಿಶೀಲನೆ ನಂತರ ಅರ್ಜಿದಾರರು ಗುರುತಿಸಿದ ಮಾಹಿತಿಯನ್ನು ಉಚಿತವಾಗಿ ನೀಡಬೇಕೆಂದು ಶ್ರೀ ಎಂ.ಎಸ್.ರಾಘವೇಂದ್ರ, ಉಪ ವಿಲೇಖನಾಧಿಕಾರಿ (ಆಡಳಿತ) ಹಾಗೂ ಸಾ.ಮಾ.ಅ. ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರಿಗೆ ಸೂಚಿಸುತ್ತದೆ.ಕ್ರಮ ಕೈಗೊಂಡ ಬಗ್ಗೆ ಆಯೋಗಕ್ಕೆ ವರದಿಯನ್ನು ಸಲ್ಲಿಸುವುದು. "

5. ದಿನಾಂಕ 30.04.2013 ರಂದು (ಅನುಬಂಧ-ಎಫ್) ಮೊದಲನೆಯ ಪ್ರತಿವಾದಿಯು ಹೊರಡಿಸಿದ ಆದೇಶದಿಂದ ಭಾದೆಗೊಳಗಾಗಿ, ಪ್ರಸ್ತುತ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ.

6. ಶ್ರೀ ನಾಗಾನಂದ್, ಮಾನ್ಯ ಹಿರಿಯ ವಕೀಲರು ಶ್ರೀ ಎಸ್. ಶ್ರೀರಂಗರವರ ಪರವಾಗಿ ಅರ್ಜಿದಾರರ ಪರ ಹಾಜರಾಗಿದ್ದು, ಎರಡನೆಯ ಪ್ರತ್ಯರ್ಜಿದಾರರ, ಅನುಬಂಧ- ಎ ರ ಮೇರೆಗೆ ರಿಟ್ ಅರ್ಜಿಸಂಖ್ಯೆ: 26762/2013 ರಲ್ಲಿನ ಮಾಹಿತಿ ಕೋರಿಕೆಗೆ ಸಂಬಂಧಿಸಿದಂತೆ, ಮಾನ್ಯ ವಕೀಲರು ನಿವೇದಿಸುವುದೇನೆಂದರೆ, ಅರ್ಜಿದಾರರ ಬಳಿ ಲಭ್ಯವಿದ್ದ ಮಾಹಿತಿಯನ್ನು ಎರಡನೆಯ ಪ್ರತ್ಯರ್ಜಿದಾರರಿಗೆ ಒದಗಿಸಲಾಗಿದೆ, ಮತ್ತು ಅರ್ಜಿದಾರರ ಬಳಿ ಲಭ್ಯವಿರುವ ಮಾಹಿತಿ ಮತ್ತು ಸಾರ್ವಜನಿಕ ಪ್ರಾಧಿಕಾರ ನಿಯಂತ್ರಣಕ್ಕೆ ಒಳಪಡದ ಮಾಹಿತಿಗೆ ಸಂಬಂಧಿಸಿದಂತೆ ಅರ್ಜಿದಾರರು ಹಿಂಬರಹವನ್ನು ನೀಡಿರುತ್ತಾರೆ ಎಂಬುದಾಗಿದೆ.ಅನುಬಂಧ- ಎ ಮೇರಗಿನ ರಿಟ್ ಅರ್ಜಿಸಂಖ್ಯೆ: 26763/2013 ರ ಅರ್ಜಿಗೆ ಸಂಬಂಧಿಸಿದಂತೆ, ಅರ್ಜಿದಾರರು, ದಾಖಲೆಯಲ್ಲಿ ಅಂತಹ ಮಾಹಿತಿಯು ಲಭ್ಯವಿರುವುದಿಲ್ಲವೆಂದು ಹೇಳಿ ಹಿಂಬರಹವನ್ನು ನೀಡಿದ್ದಾರೆ.ಕೆಲವು ಮಾಹಿತಿಗಳನ್ನು ಒ.ಎಸ್.ಸಂಖ್ಯೆ.4132/2010 ರಲ್ಲಿ ಒದಗಿಸಲಾಗಿದ್ದು, ಅದರ ವ್ಯವಹರಣೆಗಳಲ್ಲಿ ಎರಡನೆಯ ಪ್ರತ್ಯರ್ಜಿದಾರನು ಪಕ್ಷಕಾರನಾಗಿದ್ದಾನೆ.

7. ಅರ್ಜಿದಾರರ ಪರ ಮಾನ್ಯ ವಕೀಲರು, ದೆಹಲಿ ಉಚ್ಚ ನ್ಯಾಯಾಲಯದ ಪ್ರಕರಣದ, ವಿಲೇಖನಾಧಿಕಾರಿಗಳು, ಭಾರತ ಸರ್ವೋಚ್ಚ ನ್ಯಾಯಾಲಯ -ವಿರುದ್ದ ಆರ್.ಎಸ್.ಮಿಶ್ರ ' ಇದರ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ ಮತ್ತು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ವಿರುದ್ದ-ಎನ್.ಅನ್ಬರಸನ್ [2] 2 ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪಿನ ಮೇಲೆ ಅವಲ ೦ ಬಿತರಾಗಿ ವಾದ ಮಂಡಿಸುವುದೇನೆಂದರೆ, ಯಾವುದೇ ಇತರೆ ಪರಿನಿಯಮದ ಅಡಿಯಲ್ಲಿ ಮಾಹಿತಿಯು ಲಭ್ಯವಿದ್ದರೆ, ಅದೇ ಮಾಹಿತಿಯು ಆರ್ಟಿಐ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಒಳಗೊಂಡಿರುವುದಿಲ್ಲ ಎಂಬುದಾಗಿದೆ.ಅ

8. ಕರ್ನಾಟಕ ಮಾಹಿತಿ ಆಯೋಗವು ನೀಡಿದ ನಿರ್ದೇಶನವು ಆರ್ಟಿಐ ಅಧಿನಿಯಮದ ಉಪಬಂಧಗಳಾದ 5 ( 3), 5 ( 4) ಮತ್ತು 5 ( 5) ನೇ ಪ್ರಕರಣಗಳ ವಿರುದ್ದವಾಗಿದೆ ಎಂದು ಅರ್ಜಿದಾರರ ಪರ ಮಾನ್ಯ ವಕೀಲರು ಮುಂದುವರೆದು ನಿವೇದಿಸುತ್ತಾರೆ.ಆದ್ದರಿಂದ ದಿನಾಂಕ 30.04.2013 ಅನುಬಂಧ-ಎಫ್ ನಲ್ಲಿನ ಎರಡೂ ರಿಟ್ ಅರ್ಜಿಗಳ ಪ್ರಶ್ನಿತ ಆದೇಶಗಳು ಊರ್ಜಿತ ಯೋಗ್ಯವಾಗಿರುವುದಿಲ್ಲ.

9. ಇದಕ್ಕೆ ವಿರುದ್ದವಾಗಿ, ಮೊದಲನೆಯ ಪ್ರತ್ಯರ್ಜಿದಾರರಾದ ಕರ್ನಾಟಕ ಮಾಹಿತಿ ಆಯೋಗದ ಪರವಾಗಿ ಮಾನ್ಯ ವಕೀಲರ ವಾದವೇನೆಂದರೆ, ಎರಡನೆಯ ಪ್ರತ್ಯರ್ಜಿದಾರರು, ತಮ್ಮ ಅರ್ಜಿಯಲ್ಲಿ ಕೋರಿರುವಂತಹ ದಸ್ತಾವೇಜುಗಳ ಪ್ರಮಾಣಿತ ಪ್ರತಿಗಳನ್ನು ಸಿವಿಲ್ ನಿಯಮಗಳ ಪದ್ದತಿಗಳ ಅಡಿಯಲ್ಲಿ ಪಡೆದುಕೊಳ್ಳುವ ಪರಿಹಾರೋಪಾಯವಿದ್ದರೂ ಸಹ, ಆರ್ಟಿಐನ ಅಡಿಯಲ್ಲಿ ಅರ್ಜಿಯನ್ನು ಹಾಕಿ ಕೆಲವು ದಸ್ತಾವೇಜುಗಳನ್ನು ಕೋರಲು ಯಾವುದೇ ಪ್ರತಿಬಂಧವಿರುವುದಿಲ್ಲ ಎಂಬುದಾಗಿದೆ.ಆದುದರಿಂದ ಕರ್ನಾಟಕ ಮಾಹಿತಿ ಆಯೋಗವು ಹೊರಡಿಸಿದ ಆದೇಶವನ್ನು ಆಯೋಗದ ಪರ ವಾದ ಮಂಡಿಸುತ್ತಿರುವ ಮಾನ್ಯ ವಕೀಲರು ಸಮರ್ಥಿಸಿಕೊಂಡಿರುತ್ತಾರೆ.

10. ದಿನಾಂಕ 03.01.2019 ರಂದು ವಿಷಯವನ್ನು ಸುನಾವಣೆಗೆ ಒಳಪಡಿಸಲಾಯಿತು.ಆ ದಿನ, ಅರ್ಜಿದಾರರ ಪರ ಹಾಜರಾಗುವ ಮಾನ್ಯ ಹಿರಿಯ ವಕೀಲರಾದ ಶ್ರೀ ನಾಗಾನಂದರವರು ವಿಷಯದ ಬಗ್ಗೆ ವಾದ ಮಂಡಿಸಿದರು ಮತ್ತು ಎರಡನೆಯ ಪ್ರತ್ಯರ್ಜಿದಾರರ ವಕೀಲರು ಆ ದಿನ ಹಾಜರಿರುವುದಿಲ್ಲ.ಮೊದಲನೆಯ ಪ್ರತ್ಯರ್ಜಿದಾರರ ವಕೀಲರ ಕೋರಿಕೆಯ ಮೇರೆಗೆ, ವಿಷಯವನ್ನು ಮು ೦ ದಿನ ಸುನಾವಣೆಗೆ ಮುಂದೂಡಲಾಯಿತು.ಈ ದಿನ, ಮೊದಲನೆಯ ಪ್ರತ್ಯರ್ಜಿದಾರರು ವಿಷಯದ ಬಗ್ಗೆ ವಾದ ಮಂಡಿಸಿದರು ಮತ್ತು ಎರಡನೆಯ ಪ್ರತ್ಯರ್ಜಿದಾರರ ವಕೀಲರು ಹಾಜರಿರುವುದಿಲ್ಲ.ಪಕ್ಷಕಾರರ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ ಮತ್ತು ರಿಟ್ ಕಾಗದ ಪತ್ರಗಳನ್ನು ಅವಗಾಹಿಸಲಾಗಿದೆ.

11. ಅನುಬಂಧ- ಎ ನ ಮೇರೆಗೆ, ಎರಡನೆಯ ಪ್ರತ್ಯರ್ಜಿದಾರ ಅರ್ಜಿಯನ್ನು ಸಲ್ಲಿಸಿದ್ದು, ಅದರಲ್ಲಿ ಕೆಲವು ಮಾಹಿತಿಗಾಗಿ ಕೋರಿಕೆಯಿಟ್ಟಿದ್ದಾರೆ.ಸರ್ಕಾರಿ ಸಾರ್ವಜನಿಕ ಮಾಹಿತಿ ಅಧಿಕಾರಿಯ ಬಳಿ ಲಭ್ಯವಿದ್ದ ಮಾಹಿತಿಯನ್ನು ಅನುಬಂಧ-ಬಿ ಮೂಲಕ ಒದಗಿಸಲಾಯಿತು ಮತ್ತು ಲಭ್ಯವಿಲ್ಲದ ಮಾಹಿತಿಗೆ ಸಂಬಂಧಿಸಿದಂತೆ ದಾಖಲೆಯಲ್ಲಿ ಮಾಹಿತಿಯ ಲಭ್ಯವಿರುವುದಿಲ್ಲ ಎಂಬ ಹಿಂಬರಹವನ್ನು ನೀಡಲಾಯಿತು ಮತ್ತು ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು, ಇಲ್ಲಿ ಇನ್ನೂ ತೀರ್ಮಾನವಾಗದ ಓ.ಎಸ್.ಸಂಖ್ಯೆ 4132/2010 ರ ದಾವೆಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳು ಮತ್ತು ಸಂಪೂರ್ಣ ಕಡತ/ಕಾಗದ ಪತ್ರಗಳನ್ನು ಪ್ರತಿವಾದಿಯ ಪರವಾಗಿ ಹಾಜರಾಗುತ್ತಿರುವ ಮಾನ್ಯ ವಕೀಲರಿಗೆ ಒದಗಿಸಲಾಗಿದೆ ಮತ್ತು ಸದರಿ ವ್ಯವಹರಣೆಯಲ್ಲಿ ಎರಡನೆಯ ಪ್ರತ್ಯರ್ಜಿದಾರನು ಪಕ್ಷಕಾರನಾಗಿದ್ದಾನೆ.

12. ಅಪೀಲು ಪ್ರಾಧಿಕಾರವು, ರಿಟ್ ಅರ್ಜಿ ಸಂಖ್ಯೆ 26762/2013 ರಲ್ಲಿನ ಅಪೀಲು ಸಂಖ್ಯೆ 43/2012 ಮತ್ತು ರಿಟ್ ಅರ್ಜಿ ಸಂಖ್ಯೆ 26763/2013 ರಲ್ಲಿನ ಅಪೀಲು ಸಂಖ್ಯೆ 40/2012 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ:

ಆರ್‌ಟಿಐ, ಅಪೀಲು ಸಂಖ್ಯೆ 43/2012:

"3. ಪ್ರತ್ಯರ್ಜಿದಾರರಾದ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು, ವಕೀಲರ ಸುಪರ್ದಿಯಲ್ಲಿದ್ದ ಮಾಹಿತಿಯನ್ನು ಹಾಜರುಪಡಿಸಿ ಮಾಹಿತಿಯನ್ನು ಒದಗಿಸಬಹುದಿತ್ತು ಎಂಬುದು ಈ ಅಪೀಲಿನಲ್ಲಿ ಅಪೀಲುದಾರನ ವಾದವಾಗಿತ್ತು.ಮತ್ತು ಕೋರಲಾದ ಮಾಹಿತಿಯನ್ನು ನಿರಾಕರಿಸಲಾಗಿದೆ ಎಂಬುದು ಅವರ ಮುಂದುವರೆದ ವಾದವಾಗಿರುತ್ತದೆ.ಓ.ಎಸ್.ಸಂಖ್ಯೆ 4132/2010, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು, ಇಲ್ಲಿ ಇನ್ನೂ ತೀರ್ಮಾನವಾಗದೆ ಉಳಿದಿದೆ ಎಂದು ಅಧೀನ ನ್ಯಾಯಾಲಯದ ದಾಖಲೆಗಳು ತೋರಡಿಸುತ್ತದೆ.ಈ ಪ್ರಾಧಿಕಾರದ ಮುಂದೆ ನಿವೇದಿಸಿದಂತೆ, ಪ್ರಸ್ತುತ ಅಪೀಲುದಾರರು ಮತ್ತು ಮಾನ್ಯ ಉಚ್ಚ ಚ ನ್ಯಾಯಾಲಯವು, ಸದರಿ ದಾವೆಯಲ್ಲಿ ಪ್ರತಿಕೂಲ ಪಕ್ಷಕಾರರು ಎಂಬುದನ್ನು ತೋರಿಸುತ್ತದೆ.ಆದ್ದರಿಂದ, ದಾವೆಯ ಕಡತವನ್ನು, ಆ ದಾವೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಎದುರು ಚ ಹಾಜರಾಗುವ ಮಾನ್ಯ ವಕೀಲರಿಗೆ ಒಪ್ಪಿಸಲಾಗಿದೆ ಎಂಬುದರಲ್ಲಿ ನಂಬಲಾಗದ ಯಾವುದೇ ಅಂಶವಿರುವುದಿಲ್ಲ.ಅಷ್ಟೇ ಅಲ್ಲದೇ, ಅಪೀಲುದಾರರ ಅರ್ಜಿಯಲ್ಲಿ ಉಲ್ಲೇಖಿಸಲಾದ ನೋಟೀಸು ಮತ್ತು ಪ್ರತ್ಯುತ್ತರವು, ಅಪೀಲುದಾರರ ಮತ್ತು ಉಚ್ಚ ನ್ಯಾಯಾಲಯದ ಚ ಮಧ್ಯೆ ಇರುತ್ತದೆ.ಹಾಗಾಗಿ, ಅಂತಹ ಸನ್ನಿವೇಶಗಳು ಸಂಭವಿಸಿದ್ದಲ್ಲಿ, ಅಪೀಲುದಾರನ ನೋಟೀಸಿನ ಪ್ರತಿ ಮತ್ತು ಸದರಿ ನೋಟೀಸಿಗೆ ದೊರೆತ ಪ್ರತ್ಯುತ್ತರವು ಆತನ ಬಳಿಯಿರುತ್ತದೆ.ಆದ್ದರಿಂದ, ಅದರ ಮಾಹಿತಿಗೆ ಸಂಭಂದಿಸಿದ ಅಪೀಲನ್ನು ಎತ್ತಿ ಹಿಡಿಯಲಾಗದು.

4. ಎರಡನೆಯ ಅಂಶಕ್ಕೆ ಸಂಬಂಧಿಸಿದಂತೆ, ಅಂತಹ ಮಾಹಿತಿಯು ಲಭ್ಯವಿರುವುದಿಲ್ಲ ಎಂದು ಹೇಳಲಾಗಿದೆ.2011 ಎಸ್‌ಐಪಿಎಲ್ (ವೆಬ್) 685 ಎಸ್.ಸಿ.ರಲ್ಲಿ ವರದಿಯಾದ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ ವಿರುದ್ಧ-ಆದಿತ್ಯಾ ಬಂಡೋಪಾಧ್ಯಾಯ ಮತ್ತು ಇತರರು ಪ್ರಕರಣದಲ್ಲಿನ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಡುವುದೇನೆಂದರೆ, ಲಭ್ಯವಿರದ ಮಾಹಿತಿಯನ್ನು ಒದಗಿಸುವಲ್ಲಿ ಮಾಹಿತಿ ಅಧಿಕಾರಿಯು ಯಾವುದೇ ನಿರ್ಬಂಧಕ್ಕೆ ಒಳಪಡುವುದಿಲ್ಲ ಎಂಬುದಾಗಿದೆ.ಆದ್ದರಿಂದ, ಲಭ್ಯವಿಲ್ಲದ ಮಾಹಿತಿಯನ್ನು ಒದಗಿಸಲು ಪ್ರತ್ಯರ್ಜಿದಾರರಾದ ಸರ್ಕಾರಿ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ಒತ್ತಾಯಿಸುವಂತಿಲ್ಲ. ಅಂಶಗಳು ಮತ್ತು ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಈ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಗಳಿರುವುದಿಲ್ಲವೆಂದು ಕಂಡುಬರುತ್ತದೆ.ತದಾನುಸಾರ, ಈ ಅಪೀಲನ್ನು ವಜಾಗೊಳಿಸಲಾಗಿದೆ.ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.

ಆರ್‌ಟಿಐ, ಅಪೀಲು ಸಂಖ್ಯೆ 43/2012:

*2. ಉಚ್ಚ ನ್ಯಾಯಾಲಯದ ಆಡಳಿತ ಶಾಖೆಯಲ್ಲಿನ ಗಣಕಯಂತ್ರ ಶಾಖೆಯ ವರದಿಯ ಮೇರೆಗೆ, ಪ್ರತ್ಯರ್ಜಿದಾರರಾದ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ದಿನಾಂಕ 21.06.2012 ರ ಪ್ರಶ್ನಿತ ಆದೇಶ/ತಿಳುವಳಿಕೆ ಪತ್ರದ ಮೂಲಕ ಅಪೀಲುದಾರರಿಗೆ ತಿಳಿಸುವುದೇನೆಂದರೆ, ಅಂತಹ ಮಾಹಿತಿಗಳು ಲಭ್ಯವಿರುವುದಿಲ್ಲ ಎ ಂ ಬುದಾಗಿದೆ.ಅಪೀಲುದಾರನು ತನ್ನ ಅಪೀಲಿನಲ್ಲಿ, ಪ್ರತ್ಯರ್ಜಿದಾರರಾದ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ತಾವು ಕೋರಿರುವ ಮಾಹಿತಿಯನ್ನು ಒದಗಿಸಲು ನಿರ್ದೇಶನ ನೀಡಲು

ಕೋರಿರುತ್ತಾರೆ.ಮುಂದುವರೆದು, ಹೆಚ್ಚುವರಿ ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು, ಇಲ್ಲಿ ಇನ್ನೂ ತೀರ್ಮಾನವಾಗದ ಪ್ರಕರಣದ ಓ.ಎಸ್.ಸಂಖ್ಯೆ 4132/2010 ಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ಮಾಹಿತಿ ನೀಡಬೇಕೆಂದು ಕೋರಿರುವ ಬಗ್ಗೆ ಅಪೀಲುದಾರರಿಗೆ ಮಾಹಿತಿ ಒದಗಿಸಲು ಪ್ರತ್ಯರ್ಜಿದಾರರಾದ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ನಿರ್ದೇಶನ ನೀಡಬೇಕಾಗಿ ಅಪೀಲುದಾರರು ಕೋರಿಕೊಂಡಿದ್ದಾರೆ.ಆ ಮಾಹಿತಿಯು ನ್ಯಾಯಿಕ ವ್ಯವಹರಣೆಗಳ ದಾಖಲೆಯಾಗಿದ್ದು ಅದರ ಪ್ರಮಾಣಿತ ಪ್ರತಿಯನ್ನು ಅಪೀಲುದಾರರು ಕೋರಬಹುದಾಗಿದೆ.ಆದ್ದರಿಂದ, ಆ ಕ್ಲೇಮು ಸಮರ್ಥನೀಯವಾದುದಲ್ಲ.

3. ಅಪೀಲುದಾರನಿಂದ ಅರ್ಜಿ ಸ್ವೀಕರಿಸಿದ ನಂತರ, ಸದರಿ ಮಾಹಿತಿಗಾಗಿ, ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ, ಇದರ ಗಣಕಯಂತ್ರ ಶಾಖೆಗೆ ಒಂದು ಮನವಿ ಪತ್ರವನ್ನು ಬರೆದಿರುವುದರ ಬಗ್ಗೆ ಪ್ರತ್ಯರ್ಜಿದಾರರಾದ ಸರ್ಕಾರಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಒದಗಿಸಿರುವ ಅಧೀನ ನ್ಯಾಯಾಲಯದ ದಾಖಲೆಗಳು ತೋರಿಸುತ್ತವೆ.ಪತ್ಯರ್ಜಿದಾರರಾದ ಸರ್ಕಾರಿ ಸಾರ್ವಜನಿಕ ಮಾಹಿತಿ ಅಧಿಕಾರಿಯ ಮನವಿ ಪತ್ರವನ್ನು ಪರಿಷ್ಕರಿಸಿ ನಂತರ ಅಂತಹ ಮಾಹಿತಿಯು ಲಭ್ಯವಿರುವುದಿಲ್ಲ ಎಂದು ಅ ಂ ತಿಮವಾಗಿ ತಿಳಿಸಲಾಯಿತು ಎಂಬುದನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಗಣಕಯಂತ್ರ ಶಾಖೆಯ ವ್ಯವಹರಣೆಗಳು ತೋರಿಸುತ್ತವೆ.2011 ಎಸ್ಐಪಿಎಲ್ (ವೆಬ್) 685 ಎಸ್ಸಿ ಯಲ್ಲಿ ವರದಿಯಾದ ಕೇಂದ್ರ ಪ್ರೌಢಶಿಕ್ಷಣ ಮಂಡಳಿ - ವಿರುದ್ಧ ಆದಿತ್ಯ ಬಂಡೋಪಾಧ್ಯಾಯ ಮತ್ತು ಇತರರು ಪ್ರಕರಣದಲ್ಲಿನ ತೀರ್ಪಿನಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ಅಭಿಪ್ರಾಯಪಡುವುದೇನೆಂದರೆ, ಅಂತಹ ಲಭ್ಯವಾಗದ ಮಾಹಿತಿಯನ್ನು ಸಂಗ್ರಹಿಸಿ, ತಾಳೆನೋಡಿ ನಂತರ ಅದನ್ನು ಅಪೀಲುದಾರನಿಗೆ ಒದಗಿಸುವ ಸಾರ್ವಜನಿಕ ಪ್ರಾಧಿಕಾರದ ಮೇಲೆ ಆರ್.ಟಿ.ಐ ಅಧಿನಿಯಮವು ಯಾವುದೇ ನಿರ್ಬಂಧವನ್ನು ಹೇರುವುದಿಲ್ಲ.ಮೇಲೆ ಹೇಳಲಾದ ತೀರ್ಮಾನವನ್ನು ಗಮನಿಸಿದಾಗ ಈ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಯಿರುವುದಿಲ್ಲ ಎಂದು ತಿಳಿಯುತ್ತದೆ.ತದಾನುಸಾರ, ಈ ಅಪೀಲನ್ನು ವಜಾಗೊಳಿಸಲಾಗಿದೆ.ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ."

13. ಎರಡನೆಯ ಅಪೀಲಿನಲ್ಲಿ, ಮೊದಲನೆಯ ಪ್ರತ್ಯರ್ಜಿದಾರರಾದ ಕರ್ನಾಟಕ ಮಾಹಿತಿ ಆಯೋಗವು ಅರ್ಜಿದಾರರಿಗೆ ವಕೀಲರಿಂದ ದಸ್ತಾವೇಜು ಪಡೆದುಕೊಳ್ಳಲು ನಿರ್ದೇಶಿಸಿದೆ ಮತ್ತು ಎರಡನೆಯ ಪ್ರತ್ಯರ್ಜಿದಾರರಿಗೆ, ಪಡೆದ ದಸ್ತಾವೇಜನ್ನು ಪರಿಶೀಲಿಸಲು ಅನುಮತಿ ನೀಡಿದೆ.ಎರಡನೆಯ ಪ್ರತ್ಯರ್ಜಿದಾರರು ಗುರುತುಮಾಡಿದ ದಸ್ತಾವೇಜನ್ನು ಉಚಿತವಾಗಿ ಒದಗಿಸಲು ಅರ್ಜಿದಾರನಿಗೆ ನಿರ್ದೇಶನವನ್ನೂ ಸಹಾ ನೀಡಿದೆ.

14. ಇದಕ್ಕೆ ಸಂಬಂಧಿಸಿದಂತೆ, ಒಂದು ಉತ್ತಮ ತಿಳುವಳಿಕೆಗಾಗಿ, ಮೊದಲು ನಾನು ಆರ್ಟಿಐ ಅಧಿನಿಯಮದ ಉಪಬಂಧಗಳನ್ನು ಪರೀಕ್ಷಿಸಿರುತ್ತೇನೆ.ಪ್ರಸ್ತಾವನೆಯ ಪ್ರಕಾರ, ಸಾರ್ವಜನಿಕ ಪ್ರಾಧಿಕಾರಗಳ ನಿಯಂತ್ರಣದಲ್ಲಿರುವ ಮಾಹಿತಿಯನ್ನು ನಾಗರೀಕರು ಪಡೆದುಕೊಳ್ಳುವ ಸಲುವಾಗಿ ಪ್ರಾಯೋಗಿಕ ಆಡಳಿತ ಕ್ರಮವನ್ನು ಸ್ಥಾಪಿಸುವ ಉದ್ದೇಶದಿಂದ ಸದರಿ ಅಧಿನಿಯಮವನ್ನು, ಇತರ ವಿಷಯಗಳ ಜೊತೆಗೆ, ಜಾರಿಗೊಳಿಸಲಾಯಿತು.ಇದಕ್ಕೆ ಸಂಬಂಧಿಸಿದಂತೆ ಆರ್ಟಿಐ ಅಧಿನಿಯಮದ ವಿವಿಧ ಪ್ರಕರಣಗಳು ಈ ಕೆಳಗಿನಂತಿದೆ:

"( i) ಮಾಹಿತಿ ಹಕ್ಕು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ನಾಗರಿಕರು ಮಾಹಿತಿ ಹಕ್ಕನ್ನು ಹೊಂದಿರತಕ್ಕದ್ದು.

(ii) ಸಾರ್ವಜನಿಕ ಪ್ರಾಧಿಕಾರಗಳ ಹೊಣೆಗಾರಿಕೆ-ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ( ಎ) ಈ ಅಧಿನಿಯಮದ ಅಡಿಯಲ್ಲಿ, ಇತರ ವಿಷಯಗಳ ಜೊತೆ, ಗಣಕೀಕರಣಕ್ಕೆ ಸೂಕ್ತವಾದ ಎಲ್ಲಾ ದಾಖಲೆಗಳನ್ನು ಗಣಕೀಕರಿಸುವಂತೆ ಮತ್ತು ಅ ೦ ತಹ ದಾಖಲೆಗಳು ಸುಲಭವಾಗಿ ದೊರೆಯುವಂತೆ ದೇಶಾದ್ಯಾಂತ ವಿವಿಧ ಸಿಸ್ಟಂಗಳಲ್ಲಿ ಸಂಪರ್ಕಜಾಲದ ಮೂಲಕ ಸಂಪರ್ಕ ಕಲ್ಪಿಸುವಂತೆ ಮಾಡತಕ್ಕದ್ದು (ಪ್ರಕರಣ 4 ( 1) ( ಎ); (ಬಿ) ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿಯನ್ನು ಪ್ರಕಟಿಸತಕ್ಕದ್ದು (ಪ್ರಕರಣ 4 ( 1) (ಬಿ) (vi); (ಸಿ) ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ಮಾಹಿತಿಯನ್ನು ವಿದ್ಯುನ್ಮಾನ ರೂಪಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು ಪ್ರಕಟಿಸತಕ್ಕದ್ದು (ಪ್ರಕರಣ 4 ( 1) (ಬಿ) (xiv); (ಡಿ) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು ಪ್ರಕಟಿಸತಕ್ಕದ್ದು (ಪ್ರಕರಣ 4 ( 1) (ಬಿ) (xv); ( ಇ) ನಿಯಮಿಸ ಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅ ೦ ದಿನವರೆಗೆ ಪರಿಷ್ಕರಿಸತಕ್ಕದ್ದು (ಪ್ರಕರಣ 4 ( 1) (ಬಿ) (xvi); (ಎಫ್) ಪ್ರಕರಣ 4 ( 3) ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳಿಗೆ ಪ್ರತಿಯೊಂದು ಮಾಹಿತಿಯನ್ನು, ಸಾರ್ವಜನಿಕರಿಗೆ ಸುಲಭವಾಗಿ ದೊರೆಯುವಂತಹ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ವ್ಯಾಪಕವಾಗಿ ಪ್ರಸಾರ ಮಾಡತಕ್ಕದ್ದು ಎಂದು ಆಜ್ಞಾಪಿಸುತ್ತದೆ; ( ( 8 ಜಿ)) 4 ನೇ ಉಪ ಪ್ರಕರಣಗಳ ಉದ್ದೇಶಗಳಿಗಾಗಿ ಪ್ರಸಾರ ಮಾಡಲಾದ ' ಎಂದರೆ ಯಾವುದೇ ಸಾರ್ವಜನಿಕ ಪ್ರಾಧಿಕಾರದ ಕಛೇರಿಗಳ ಪರಿಶೀಲನೆಯು ಒಳಗೊಂಡಂತೆ ಮಾಹಿತಿಯನ್ನು ಸೂಚನಾ ಫಲಕಗಳು, ವೃತ್ತ ಪತ್ರಿಕೆಗಳು, ಸಾರ್ವಜನಿಕ ಪ್ರಕಟಣೆಗಳು, ಮಾಧ್ಯಮದ ಮೂಲಕ ಪ್ರಸಾರಗಳು, ಅ ೦ ರ್ತಜಾಲ ಅಥವಾ ಯಾವುದೇ ಇತರ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ತಿಳಿಯುವಂತೆ ಮಾಡುವುದು ಅಥವಾ ತಿಳಿಸುವುದು; (ಎಚ್) ಪ್ರಕರಣ 4 ( 2) ಈ ಕೆಳಗಿನಂತಿದೆ:

* ( 2) ಮಾಹಿತಿ ಪಡೆಯುವುದಕ್ಕಾಗಿ, ಈ ಅಧಿನಿಯಮದ ಉಪಯೋಗವನ್ನು ಕನಿಷ್ಠ ಪ್ರಮಾಣದಲ್ಲಿ ಅವಲ ೦ ಬಿಸುವುದಕ್ಕಾಗಿ ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು ಅಂತರ್ಜಾಲವೂ ಸೇರಿದಂತೆ, ಅಂಥ ಮಾಹಿತಿಯನ್ನು ವಿವಿಧ ಸಂಪರ್ಕಸಾಧನಗಳ ಮೂಲಕ ನಿಯಮಿತ ಮಧ್ಯಂತರದಲ್ಲಿ ( 1) ನೇ ಉಪ-ಪ್ರಕರಣದಲ್ಲಿ (ಬಿ) ಖಂಡದ ಅಗತ್ಯಗಳಿಗನುಸಾರವಾಗಿ ಸಾರ್ವಜನಿಕರಿಗೆ ಸಾಕಷ್ಟು ಮಾಹಿತಿ ದೊರಕಿಸಿಕೊಡಲು ಕ್ರಮ ತೆಗೆದುಕೊಳ್ಳುವುದು ಅದರ ನಿರಂತರ ಪ್ರಯತ್ನವಾಗಿರತಕ್ಕದ್ದು."

(iii) ಮೇಲೆ ಹೇಳಿದಂತೆ, ಇತರ ವಿಷಯಗಳ ಜೊತೆಗೆ, ಆರ್‌ಟಿಐ ಅಧಿನಿಯಮದ 4 ನೇ ಪ್ರಕರಣ, 5 ನೇ ಪ್ರಕರಣದಲ್ಲಿರುವಂತೆ, ಸಾರ್ವಜನಿಕ ಪ್ರಾಧಿಕಾರಗಳಿಂದ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಜೊತೆಗೆ ನೇಮಕಾತಿಯನ್ನು ಒದಗಿಸುವಲ್ಲಿ ಮುಂದುವರೆಯುತ್ತದೆ ಮತ್ತು ನಮ್ಮ ಉದ್ದೇಶಕ್ಕೆ ಸಂಬಂಧಪಟ್ಟ ಪ್ರಕರಣ 5 ರ ಉದ್ಧೃತ ಭಾಗವು ಈ ಕೆಳಗಿನಂತಿದೆ:

* (1) ಪ್ರತಿಯೊಂದು ಸಾರ್ವಜನಿಕ ಪ್ರಾಧಿಕಾರವು, ಈ ಅಧಿನಿಯಮವನ್ನು ಅಧಿನಿಯಮಿತಗೊಳಿಸಿದ ದಿನಾಂಕದಿಂದ ನೂರು ದಿನಗಳೊಳಗಾಗಿ, ಈ ಅಧಿನಿಯಮದ ಅಡಿಯಲ್ಲಿ ಮಾಹಿತಿಗಾಗಿ ಕೋರಿಕೆ ಸಲ್ಲಿಸುವ ವ್ಯಕ್ತಿಗಳಿಗೆ ಮಾಹಿತಿ ಒದಗಿಸಲು, ಅದರ ಅಧೀನದಲ್ಲಿರುವ ಎಲ್ಲ ಆಡಳಿತ ಘಟಕಗಳು ಅಥವಾ ಕಚೇರಿಗಳಲ್ಲಿ

ಅವಶ್ಯಕವಾಗಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ಅಥವಾ ಸಂದರ್ಭಾನುಸಾರ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ಪದನಾಮೀಕರಿಸತಕ್ಕದ್ದು.

(3) ಪ್ರತಿಯೊಬ್ಬ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅಥವಾ ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮಾಹಿತಿ ಕೋರುವ ವ್ಯಕ್ತಿಗಳಿಂದ ಬರುವ ಮನವಿಗಳ ಬಗ್ಗೆ ವ್ಯವಹರಿಸತಕ್ಕದ್ದು ಮತ್ತು ಅಂತಹ ಮಾಹಿತಿ ಕೋರುವ ವ್ಯಕ್ತಿಗಳಿಗೆ ಸೂಕ್ತ ನೆರವು ನೀಡತಕ್ಕದ್ದು.

(iv) ಮತ್ತು ಆರ್‌ಟಿಐ ಅಧಿನಿಯಮದ ಅಡಿಯಲ್ಲಿ ಮಾಹಿತಿ ಕೋರಿಕೆಯ ಪ್ರಕ್ರಿಯೆಯನ್ನು ಪ್ರಕರಣ 6 ರಲ್ಲಿರುವಂತೆ ಒದಗಿಸುತ್ತದೆ ಮತ್ತು ಈ ಉದ್ದೇಶಕ್ಕೆ ಸಂಬಂಧಿಸಿದ ಪ್ರಕರಣ 6 ರ ಉತ ಭಾಗವು ಈ ಕೆಳಗಿನಂತಿದೆ:

" ಮಾಹಿತಿ ಪಡೆಯುವುದಕ್ಕಾಗಿ ಕೋರಿಕೆ- ( 1) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಮಾಹಿತಿಯನ್ನು ಅ ಪಡೆಯಲಿಚ್ಛಿಸುವ ವ್ಯಕ್ತಿಯು ಲಿಖಿತದಲ್ಲಿ ಅಥವಾ ವಿದ್ಯುನ್ಮಾನ ಸಾಧನಗಳ ಮೂಲಕ ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಅಥವಾ ಸಲ್ಲಿಸಲಾಗುತ್ತಿರುವಂಥ ಅಧಿಕೃತ ಪ್ರಾದೇಶಿಕ ಭಾಷೆಯಲ್ಲಿ ಅ ಅರ್ಜಿಯನ್ನು ಆತನು ಅಥವಾ ಆಕೆಯು ಕೋರಿರುವ ಮಾಹಿತಿಯ ವಿವರಗಳನ್ನು ನಿರ್ದಿಷ್ಟಪಡಿಸಿ, ನಿಗದಿಪಡಿಸಬಹುದಾದ ಶುಲ್ಕಗಳೂ ಸೇರಿದಂತೆ ಮುಂದಿನವರಿಗೆ ಕೋರಿಕೆಯನ್ನು ಸಲ್ಲಿಸತಕ್ಕದ್ದು."

(ಎ) ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರದ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ

(ಬಿ) ಕೇಂದ್ರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಸಂದರ್ಭಾನುಸಾರ, ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ; ಆತ ಅಥವಾ ಆಕೆಯು ಕೋರಿರುವ ಮಾಹಿತಿಯ ವಿವರಗಳನ್ನು ನಿರ್ದಿಷ್ಟಪಡಿಸಿ:

ಪರಂತು, ಅಂತಹ ಕೋರಿಕೆಯನ್ನು ಲಿಖಿತದಲ್ಲಿ ಸಲ್ಲಿಸಲು ಸಾಧ್ಯವಿಲ್ಲದಿರುವ ಪಕ್ಷದಲ್ಲಿ, ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅಥವಾ ಸಂದರ್ಭಾನುಸಾರ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಅಥವಾ ಸಂದರ್ಭಾನುಸಾರ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮೌಖಿಕವಾಗಿ ಕೋರಿಕೆ ಸಲ್ಲಿಸಿದ ವ್ಯಕ್ತಿಗೆ ಅದನ್ನು ಬರವಣಿಗೆ ಮೂಲಕ ಕಾರ್ಯರೂಪಕ್ಕೆ ತರುವ ಎಲ್ಲಾ ಸೂಕ್ತ ನೆರವು ನೀಡತಕ್ಕದ್ದು.

(2) ಮಾಹಿತಿಗಾಗಿ ಕೋರಿಕೆ ಸಲ್ಲಿಸುವ ಅರ್ಜಿದಾರನನ್ನು, ಅವನನ್ನು ಸ ಂ ಪರ್ಕಿಸಲು ಅವಶ್ಯವಿರುವ ವಿವರಗಳನ್ನು ಹೊರತುಪಡಿಸಿ ಮಾಹಿತಿ ಕೋರಿಕೆಗೆ ಯಾವುದೇ ಕಾರಣವನ್ನು ಅಥವಾ ಯಾವುದೇ ಇತರ ವೈಯಕ್ತಿಕ ವಿವರಗಳನ್ನು ನೀಡುವಂತೆ ಅಗತ್ಯಪಡಿಸತಕ್ಕದ್ದಲ್ಲ.

( v) 7 ನೇ ಪ್ರಕರಣಕ್ಕೆ ಒಳಪಟ್ಟು, ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯು ಕೋರಿಕೆಯನ್ನು ಸ್ವೀಕರಿಸಿದ ನಂತರ ತ್ವರಿತವಾಗಿ ಮತ್ತು ಯಾವುದೇ ಸಂದರ್ಭದಲ್ಲಿ ಕೋರಿಕೆ ಸ್ವೀಕರಿಸಿದ ಮೂವತ್ತು ದಿವಸಗಳೊಳಗಾಗಿ, ನಿಗದಿಪಡಿಸಬಹುದಾದಂತಹ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಮಾಹಿತಿ ಒದಗಿಸತಕ್ಕದ್ದು ಅಥವಾ 8 ಮತ್ತು 9 ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಕಾರಣಗಳಿಗಾಗಿ ಕೋರಿಕೆಯನ್ನು ತಿರಸ್ಕರಿಸತಕ್ಕದ್ದು;

(vi) ಮಾಹಿತಿ ಬಹಿರಂಗಪಡಿಸುವುದರಿಂದ ವಿನಾಯಿತಿಯನ್ನು ಪ್ರಕರಣ 8 ಒದಗಿಸುತ್ತದೆ ಮತ್ತು ಮಾಹಿತಿಯನ್ನು ಒದಗಿಸುವುದರಿಂದ ರಾಜ್ಯವನ್ನು ಹೊರತುಪಡಿಸಿ, ಒಬ್ಬ ವ್ಯಕ್ತಿಯು ಹೊಂದಿರುವ

ಕೃತಿಸ್ವಾಮ್ಯದ ಉಲ್ಲಂಘನೆಯಾಗಬಹುದಾದಲ್ಲಿ ಮಾಹಿತಿಗಾಗಿ ಮಾಡಿದ ಕೋರಿಕೆಯನ್ನು ನಿರಾಕರಿಸಬಹುದು ಎಂದು 9 ನೇ ಪ್ರಕರಣವು ಒದಗಿಸುತ್ತದೆ.

(vii) ಸರ್ಕಾರಿ ರಹಸ್ಯಗಳ ಅಧಿನಿಯಮ 1923 (1923 ರ 19) ರಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಈ ಅಧಿನಿಯಮದ ಹೊರತಾಗಿ ಇತರ ಯಾವುದೇ ಕಾನೂನಿನ ಬಲದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಅಸಂಗತವಾದುದೇನೇ ಇದ್ದರೂ ಈ ಅಧಿ ನಿಯಮದ 22 ನೇ ಪ್ರಕರಣದ ಉಪಬ ಂ ಧಗಳು ಪರಿಣಾಮಕಾರಿಯಾಗಿರತಕ್ಕದ್ದು.

15. ಆರ್‌ಟಿಐ ಅಧಿನಿಯಮದ 22 ನೇ ಪ್ರಕರಣವನ್ನು ಪರಿಗಣಿಸುವಾಗ, ನಮಿತ್ ಶರ್ಮಾ –ವಿರುದ್ಧ ಯೂನಿಯನ್ ಆಫ್ ಇಂಡಿಯಾ 3 [3] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ನಿರ್ಣಯಿಸಿದೆ:

"79. ಆಯೋಗದ ಕಾರ್ಯನಿರ್ವಹಣೆಯಲ್ಲಿ ಬಹು ಪ್ರಾಮುಖ್ಯತೆಯುಳ್ಳ ಇನ್ನಿತರ ಪೂರ್ವಾಪೇಕ್ಷಿತಗಳನ್ನು ಈಗ ನಾವು ಪರೀಕ್ಷಿಸೋಣ.ಸರ್ಕಾರಿ ರಹಸ್ಯಗಳ ಅಧಿನಿಯಮ 1923 ರಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಈ ಅಧಿನಿಯಮದ ಹೊರತಾಗಿ ಇತರ ಯಾವುದೇ ಕಾನೂನಿನ ಬಲದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಅಸಂಗತವಾದುದೇನೇ ಇದ್ದರೂ ಈ ಅಧಿನಿಯಮದ 22 ನೇ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.ಆದ್ದರಿಂದ, ಚಾಲ್ತಿಯಲ್ಲಿರುವ ನಿರ್ದಿಷ್ಟ ಅಧಿನಿಯಮಗಳು ಮತ್ತು ಲಿಖಿತಪತ್ರಗಳ ಮೇಲೂ ಮೇಲುಗೈಯನ್ನು ಈ ಅಧಿನಿಯಮವು ಹೊಂದಿದೆ.ಆದಾಗ್ಯೂ, ಅದು ಎರಡರ ಮಧ್ಯೆ ಹೊಂದಾಣಿಕೆಯಾದ ವ್ಯಾಪ್ತಿಗೆ ಮಾತ್ರ ಬರುತ್ತದೆ.ಆದ್ದರಿಂದ, ಯಾವುದೇ ಭಿನ್ನಾಭಿಪ್ರಾಯವಿಲ್ಲದೆ, ಇನ್ನಿತರ ಯಾವುದೇ ಕಾನೂನಿನ ಉಪಬಂಧಗಳ ಸಾಮರಸ್ಯದಿಂದ ಅನ್ವಯಿಸುವುದಾದರೆ, ವಿರೋಧಾಭಾಸದ ಪ್ರಶ್ನೆಯು ಉದ್ಭವಿಸುವುದಿಲ್ಲ."

16. ರಿಜಿಸ್ಟ್ರಾರ್, ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರವರ (ಮೇಲಿನ) ಪ್ರಕರಣದಲ್ಲಿ, ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"53. ಈವರೆಗೆ ಸಾರ್ವಜನಿಕ ಪ್ರಾಧಿಕಾರಗಳ ಬಳಿ ಲಭ್ಯವಿರದ ಮಾಹಿತಿಯು ನಾಗರಿಕರಿಗೆ ದೊರಕುವ ಉದ್ದೇಶದಿಂದ ಆರ್‌ಟಿಐ ಅಧಿನಿಯಮವನ್ನು ಅಧಿನಿಯಮಿತಗೊಳಿಸಲಾಯಿತು ಎಂಬುದನ್ನು ಪ್ರಸ್ತಾವನೆಯು ತೋರಡಿಸುತ್ತದೆ.ಈಗಾಗಲೇ ಲಭ್ಯವಿರುವ ಸದರಿ ಮಾಹಿತಿಗಳನ್ನು ಪಡೆಯಲು ನಿಯಮಗಳು ಮತ್ತು ಯೋಜನೆಗಳನ್ನು ರೂಪಿಸಿಕೊಂಡಿರುವ ಸಾರ್ವಜನಿಕ ಪ್ರಾಧಿಕಾರಗಳ ಬಳಿ ಮಾಹಿತಿಯನ್ನು ಪಡೆಯಲು ಹೆಚ್ಚುವರಿ ವಿಧಾನವನ್ನು ಒದಗಿಸುವ ಬಗ್ಗೆ ಆರ್‌ಟಿಐ ಅಧಿನಿಯಮದ ಪ್ರಸ್ತಾವನೆಯಾಗಲೀ ಅಥವಾ ಆರ್‌ಟಿಐ ಅಧಿನಿಯಮದ ಯಾವುದೇ ಇನ್ನಿತರ ಉಪಬಂಧಗಳಾಗಲೀ, ಆರ್‌ಟಿಐ ಅಧಿನಿಯಮದ ತಾತ್ಪರ್ಯವನ್ನು ಬಹಿರಂಗಪಡಿಸುವುದಿಲ್ಲ.ನಿಶ್ಚಿತವಾಗಿ, ಆರ್‌ಟಿಐಯ ಅಧಿನಿಯಮದ ಅಡಿಯಲ್ಲಿ ಮಾಹಿತಿ ಪಡೆಯಲು ಅವಕಾಶ ಮಾಡಿದ್ದರೂ ಸಹ, ಸದರಿ ನಿಯಮಗಳು, ನಿಬಂಧನೆಗಳು ಮತ್ತು ಯೋಜನೆಗಳು ಮಾಹಿತಿ ಪಡೆಯುವ ಅವಕಾಶ ಒದಗಿಸಿಲ್ಲವಾದರೆ, ಆಗ ಆರ್‌ಟಿಐ ಅಧಿನಿಯಮದ ಉಪಬಂಧಗಳ ಮೇಲೆ ಅವಲಂಬಿತವಾಗಬೇಕೆ ಹೊರತು ಮಾಹಿತಿ ಪಡೆಯುವ ನಕಲು ವಿಧಾನಗಳ ಅಥವಾ ಅದರ ಸಂಖ್ಯೆಯನ್ನು ಹೆಚ್ಚು ಮಾಡುವುದರ ಮೇಲಲ್ಲ.

54. ಈ ನ್ಯಾಯಾಲಯವು ಮುಂದುವರೆದು ಅಭಿಪ್ರಾಯ ಪಡುವುದೇನೆಂದರೆ, ಬೇರೆ ಯಾವುದೇ ನಿಬಂಧನೆಯ ಅಡಿಯಲ್ಲಿ ಯಾಂತ್ರಿಕ ವ್ಯವಸ್ಥೆಯ ಮೂಲಕ ಮಾಹಿತಿ ಪಡೆಯುವುದಾದರೆ, ಆರ್ ಟಿ ಐ ಅಧಿ ನಿಯಮದ ಉಪಬ ಂ ಧಗಳ ಮೇಲೆ ಅವಲ ಂ ಭಿತವಾಗಲು ಸಾಧ್ಯವಿಲ್ಲ.ಏಕೆಂದರೆ ಆರ್ಟಿಐ ಅಧಿನಿಯಮದ ಉಪಬಂಧದಲ್ಲಿ ಮಾಹಿತಿ ಕೋರಲು ಮೂಲವಾದ ಪಾರದರ್ಶಕತೆ ಕೊರತೆಯ ಅನುಪಸ್ಥಿತಿಯಿರುತ್ತದೆ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಆರ್ಟಿಐ ಅಧಿನಿಯಮದ ಉಪಬ 0 ಧಗಳು ಪಾರದರ್ಶಕತೆ ಸಾಧಿಸಲು ಚಾಲನೆ ನೀಡದಿದ್ದಲ್ಲಿ, ಅದರ ಮೇಲೆ ಅವಲಂಭಿತವಾಗಲು ಸಾಧ್ಯವಿಲ್ಲ."

17. ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ -ವಿರುದ್ಧ-ಎನ್.ಅನ್ಯರಸನ್ (ಮೇಲಿನಂತೆ), ವರದಿಯಾದ ಪ್ರಕರಣದಲ್ಲಿ ನ್ಯಾಯಾಲಯವು ಅಭಿಪ್ರಾಯಪಡುವುದೇನೆಂದರೆ, ಸದರಿ ಪ್ರಕರಣದಲ್ಲಿ ಕೋರಿರುವ ಕೆಲವೊಂದು ಮಾಹಿತಿಯು ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಲಭ್ಯವಿದ್ದರೆ, ಆರ್ಟಿಐ ಅಧಿನಿಯಮದ ಅಡಿಯಲ್ಲಿ ಅದೇ ಪ್ರತಿಗಳನ್ನು ಕೇಳಲು ಪ್ರತ್ಯರ್ಜಿದಾರರಿಗೆ ಅವಕಾಶವಿರುವುದಿಲ್ಲ.ರಿಟ್ ಅರ್ಜಿ ಸಂಖ್ಯೆ 17935/2006 ಕ್ಕೆ ಸಂಬಂಧಿಸಿದ ಸದರಿ ಪ್ರಕರಣದಲ್ಲಿನ ಸಂಖ್ಯೆ 6 ರಿಂದ 17 ರ ವಸ್ತುಗಳ ಮಾಹಿತಿ ಮತ್ತು ಸದರಿ ವ್ಯವಹರಣೆಯಲ್ಲಿ ಪತ್ಯರ್ಜಿದಾರನು ಪಕ್ಷಕಾರನಾಗಿದ್ದು, ನಿಯಮಗಳನುಸಾರ, ಪ್ರತ್ಯರ್ಜಿದಾರನು ಆದೇಶ ಪತ್ರದ ಅಥವಾ ಸಂಬಂಧಿತ ದಸ್ತಾವೇಜುಗಳ ಪ್ರಮಾಣಿತ ಪತ್ರಗಳನ್ನು ಕೋರಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ.

18. ಮೇಲಿನ ಚರ್ಚೆಯನ್ನು ಗಮನಿಸಿದಾಗ, ಮತ್ತೊಂದು ನಿಬಂಧನೆಯ ಅಡಿಯಲ್ಲಿ, ಯಾಂತ್ರಿಕ ವ್ಯವಸ್ಥೆಯ ಮೂಲಕ ಮಾಹಿತಿ ಪಡೆಯಲು ಅವಕಾಶವಿದ್ದರೆ, ಆರ್ಟಿಐ ಅಧಿನಿಯಮದ ಉಪಬಂಧಗಳ ಮೇಲೆ ಅವಲಂಭಿತವಾಗುವ ಅವಶ್ಯಕತೆಯಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ.ಎರಡನೆಯ ಪ್ರತ್ಯರ್ಜಿದಾರನು ತನ್ನ ವಕೀಲರ ಮೂಲಕ ಹೊರಡಿಸಿದ ಕಾನೂನು ನೋಟಿಸಿನ ಮಾಹಿತಿ ಕೋರಿಕೆಗೆ ಸಂಬಂಧಿಸಿದ ವಿಷಯ ಪ್ರಸ್ತುತ ಪ್ರಕರಣದಲ್ಲಿದೆ.ಇದು ಎರಡನೆಯ ಪತ್ಯರ್ಜಿದಾರನ ಹತ್ತಿರ ಲಭ್ಯವಿರುತ್ತದೆ.ಸಿವಿಲ್ ನ್ಯಾಯಾಲಯ, ಬೆಂಗಳೂರು, ಇಲ್ಲಿ ಇನ್ನೂ ತೀರ್ಮಾನವಾಗದೆ ಓ.ಎಸ್.ಸಂಖ್ಯೆ 4132/2010 ಗೆ ಸಂಬಂಧಿಸಿದ ಇನ್ನಿತರ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ, ನಿಯಮಗಳ ಪದ್ಧತಿಯ ನಿಯಮ 230 ರ ಉಪಬಂಧಗಳ ಪ್ರಕಾರ ಆತನು ಅರ್ಜಿಯನ್ನು ಸಲ್ಲಿಸುವುದರ ಮೂಲಕ ಅದರ ಪ್ರಮಾಣಿತ ಪತ್ರಗಳನ್ನು ಪಡೆದುಕೊಳ್ಳಬಹುದು.ಎರಡನೆಯ ಪ್ರತ್ಯರ್ಜಿದಾರನು ವ್ಯವಹರಣೆಗಳಿಗೆ ಪಕ್ಷಕಾರನಾಗಿರುವುದರಿಂದ, ಅದರ ಪ್ರಮಾಣಿತ ಪತ್ರಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅದನ್ನು ಪಡೆದುಕೊಳ್ಳಬಹುದು.ಸಿವಿಲ್ ನಿಯಮಗಳ ನಿಯಮ 230 ರ ಉಪಬಂಧಗಳ ಉದ್ಧೃತ ಭಾಗವು ಈ ಕೆಳಗಿನಂತಿದೆ:

"230. ಪಕ್ಷಕಾರನಿಂದ ಅರ್ಜಿ-ವ್ಯವಹರಣೆಗಳ ಯಾವುದೇ ಹಂತದಲ್ಲೂ, ದಾವೆ ಅಥವಾ ವ್ಯವಹರಣೆಗಳ ಪಕ್ಷಕಾರನು, ಸಾಕ್ಷ್ಯಾಧಾರದಲ್ಲಿ ಸೇರಿಸಿದ ದಸ್ತಾವೇಜುಗಳನ್ನು ಒಳಗೊಂಡಂತೆ, ದಾವೆ ಅಥವಾ ವ್ಯವಹರಣೆಗಳ ದಾಖಲೆಯ ಪ್ರತಿಯನ್ನು ಪಡೆಯಲು ಅರ್ಹರಾಗಿರುತ್ತಾನೆ.[ಸಾಕ್ಷ್ಯಾಧಾರದಲ್ಲಿ ಸೇರಿಸಿದ ದಸ್ತಾವೇಜುಗಳು ಮೂಲ ಪ್ರತಿ ಅಥವಾ ಪ್ರಮಾಣಿತ ಪ್ರತಿಗಳು ಯಾವುದಿದ್ದರೂ ಸಹ] "

19. ರಾಜ್ಯ ಮಾಹಿತಿ ಅಧಿಕಾರಿಯು, ಅಧಿನಿಯಮದ ಈ ಉಪಬಂಧಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಆದೇಶವನ್ನು ಹೊರಡಿಸಿರುತ್ತಾರೆ.ಅರ್ಜಿಯಲ್ಲಿ ಕೋರಲಾದ ಪ್ರತಿಗಳನ್ನು ಪ್ರಸ್ತುತಪಡಿಸಿ ಎಂದು

ಅರ್ಜಿದಾರನಿಗೆ ನಿರ್ದೇಶನ ನೀಡುವುದು ಸಮರ್ಥನೀಯವಾದುದಲ್ಲ.ಆದ್ದರಿಂದ, ಪ್ರಶ್ನಿತ ಆದೇಶವನ್ನು ಎತ್ತಿಹಿಡಿಯಲಾಗುವುದಿಲ್ಲ.ತದಾನುಸಾರ, ಅನುಬಂಧ-ಎಫ್ ನ ದಿನಾಂಕ 30.04.2013 ರ ಎರಡೂ ಅರ್ಜಿಯಲ್ಲಿನ ಪ್ರಶ್ನೈತ ಆದೇಶಗಳನ್ನು ವಜಾಗೊಳಿಸಲಾಗಿದೆ.

ತದಾನುಸಾರ, ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.